ಹೀಗೆ ಶ್ರೀರಾಮನು ಹನ್ನೆರಡು ವರ್ಷಗಳ ಕಾಲ ತನ್ನ ಪ್ರಿಯ ಭಕ್ತನನ್ನು ಕಡುಕಷ್ಟಕ್ಕೆ ಸಿಲುಕಿಸಿ ಪರೀಕ್ಷಿಸಿದನು. ಒಂದು ದಿನ ಒಂದು ಅದ್ಭುತ ಘಟನೆ ನಡೆಯಿತು: ಸರಿರಾತ್ರಿಯ ಹೊತ್ತು. ದೊರೆ ತಾನಾ ಷಾ ವಿಶ್ರಾಂತಿ ಪಡೆಯುತ್ತಿದ್ದನು. ರಾಮದಾಸರ ಸಹಾಯಕರೆಂದು ಹೇಳಿಕೊಂಡ ಸುಂದರಾಂಗರಾದ ಇಬ್ಬರು ನವಯುವಕರು ಅರಮನೆಗೆ ಬಂದರು. ದೊರೆಯ ಅಂತಃಪುರದ ಬಾಗಿಲನ್ನು ಬಡಿದರು. ಶತ್ರುಗಳೆಂದು ಭಾವಿಸಿ ರಾಜನು ಖಡ್ಗವನ್ನು ಸೆಳೆದು ಬಾಗಿಲನ್ನು ತೆಗೆದನು. ಬಂದಿದ್ದವರಲ್ಲಿ ಒಬ್ಬನು, ತನ್ನ ಹೆಸರು ರಾಮೋಜಿ ಎಂದನು. ಇನ್ನೊಬ್ಬನು ಲಕ್ಷ್ಮಣೋಜಿ ಎಂದು ಕರೆದುಕೊಂಡನು. ತಾವು ರಾಮದಾಸನ ಸಹಾಯಕರೆಂದೂ, ದೊರೆಗೆ ಸಲ್ಲಬೇಕಾದ ಹತ್ತುಸಾವಿರ ಮೊಹರುಗಳನ್ನು ತಂದಿದ್ದೇವೆಂದೂ ರಾಮೋಜಿಯು ಹೇಳಿಕೊಂಡನು. ಇತ್ತ ಲಕ್ಷ್ಮಣೋಜಿಯು ತನ್ನ ಕೈಯ ಚೀಲದಲ್ಲಿದ್ದ ಚಿನ್ನದ ನಾಣ್ಯಗಳನ್ನು ನೆಲದ ಮೇಲೆ ಸುರಿದನು. ಹಣ ಕೊಟ್ಟಿದ್ದಕ್ಕಾಗಿ ರಸೀದಿಯನ್ನು ಪಡೆದು, ಬಂದಿದ್ದ ಆ ಯುವಕರು ಹೊರಟು ಹೋದರು.

ಹೀಗೆ ರಾಮಲಕ್ಷ್ಮಣರ ಸುಮನೋಹರ ದಿವ್ಯ ಮಂಗಳ ರೂಪವನ್ನು ಕಂಡು ತಾನಾ ಷಾ ದೊರೆಯು ಮಂತ್ರಮುಗ್ಧನಾದನು. ಅವರಿಬ್ಬರನ್ನಲ್ಲದೆ ಬೇರೆ ಏನನ್ನು ಯೋಚಿಸಲೂ ಅವನಿಗೆ ಆಗಲಿಲ್ಲ. ರಾಮೋಜಿ, ಲಕ್ಷ್ಮಣೋಜಿ ಎಂದು ಬಡಬಡಿಸುತ್ತಿದ್ದನು. ಕೂಡಲೇ ಅವನು ದಿವಾನ ಅಂಕಣ್ಣನನ್ನು ಕರೆಸಿದನು. ರಾಮೋಜಿ, ಲಕ್ಷ್ಮಣೋಜಿ – ಇಬ್ಬರನ್ನೂ ಮತ್ತೆ ನೋಡಬೇಕೆಂದು ಹಪಹಪಿಸಿದನು.

ಅಷ್ಟರಲ್ಲಿ ರಾಮಲಕ್ಷ್ಮಣರು ಸೆರೆಮನೆಗೆ ಬಂದರು. ಸೆರೆಮನೆಯಲ್ಲಿದ್ದ ರಾಮದಾಸರ ಕೊಠಡಿಯ ಕಿಟಕಿಯಿಂದ ರಸೀದಿಯನ್ನು ತೂರಿಸಿದರು. ಹಣಕ್ಕೆ ತಾನಾ ಷಾ ಕೊಟ್ಟ ರಸೀದಿಯನ್ನು ಕಂಡು ರಾಮದಾಸರಿಗೆ ಆಶ್ಚರ್ಯ, ಆನಂದಗಳು ಒಮ್ಮೆಗೇ ಉಂಟಾದವು. ರಸೀದಿಯಲ್ಲಿ ನಮೂದಿಸಿದ ರಾಮೋಜಿ, ಲಕ್ಷ್ಮಣೋಜಿ ಯಾರಿರಬಹುದು ಎಂದು ಚಿಂತಿಸತೊಡಗಿದರು.

ಇತ್ತ ತಾನಾ ಷಾ ತನ್ನ ದಿವಾನ ಅಂಕಣ್ಣನೊಡನೆ, ಸೆರೆಮನೆಗೆ ಧಾವಿಸಿ ಬಂದನು. ರಾಮದಾಸರ ಎರಡೂ ಕೈಗಳನ್ನು ಹಿಡಿದುಕೊಂಡು, ''ಸ್ವಾಮಿ, ಎಲ್ಲಿದ್ದಾರೆ ಅವರು? ಎಲ್ಲಿದ್ದಾನೆ ರಾಮೋಜಿ, ಎಲ್ಲಿದ್ದಾನೆ ಲಕ್ಷ್ಮಣೋಜಿ?'' ಎಂದು ಹುಚ್ಚನಂತೆ ಬಡಬಡಿಸಿದನು. ರಾಮಲಕ್ಷ್ಮಣರನ್ನು ಕಾಣುವ ತವಕ ಅವನಲ್ಲಿ ವಿಪರೀತವಾಯಿತು. ಕ್ರಮೇಣ ರಾಮದಾಸರಿಗೆ ನಡೆದಿದ್ದೆಲ್ಲ ತಿಳಿದುಬಂತು. ಸಾಕ್ಷಾತ್ ರಾಮಚಂದ್ರಸ್ವಾಮಿಯೇ ತನ್ನ ತಮ್ಮ ಲಕ್ಷ್ಮಣನೊಡನೆ ಈ ಮುಸ್ಲಿಂ ದೊರೆಗೆ ದರ್ಶನ ಕೊಟ್ಟಿರುವನೆಂದು ತಿಳಿದ ಅವರ ಮನಸ್ಸು ತುಂಬಿಬಂತು. ತಮಗೆ ದರ್ಶನ ನೀಡದ ಪ್ರಭು ಈ ದೊರೆಗೆ ಆ ಭಾಗ್ಯವನ್ನು ಕರುಣಿಸಿದನಲ್ಲಾ ಎಂದು ತಾನಾ ಷಾನ ಸೌಭಾಗ್ಯವನ್ನು ನೆನೆದು ಅವನ ಮೇಲೆ ಮೆಚ್ಚುಗೆ ಮೂಡಿತು. ಅವರು ತಾನಾ ಷಾಗೆ, ''ದೊರೆಯೇ, ನೀವು ಭದ್ರಾಚಲಕ್ಕೆ ಬಂದರೆ ನನ್ನ ರಾಮನನ್ನು ತೋರಿಸುವೆ, ಅವನ ತಮ್ಮನಾದ ಲಕ್ಷ್ಮಣನನ್ನು ತೋರಿಸುವೆ'' ಎಂದರು.

ರಾಮದಾಸರೊಡನೆ ದೊರೆಯು ಗ್ರಾಮಕ್ಕೆ ಆಗಮಿಸುತ್ತಿರುವನೆಂಬ ವಾರ್ತೆಯು ಎಲ್ಲೆಡೆ ಹಬ್ಬಿತು. ಗ್ರಾಮಸ್ಥರೆಲ್ಲ ನೆರೆದರು. ರಾಮದಾಸರು ತಾನಾ ಷಾ ದೊರೆಗೆ ದೇವಾಲಯವನ್ನು ತೋರಿಸಿದರು. ''ನಿಮಗೆ ಸೇರಬೇಕಾದ ಕಂದಾಯದ ಹಣದಿಂದ ಈ ಮಂದಿರದ ನಿರ್ಮಾಣ ನಡೆದಿದೆ. ಅದಕ್ಕೆಂದೇ ರಾಮಲಕ್ಷ್ಮಣರು ನಿಮಗೆ ದರ್ಶನಭಾಗ್ಯವನ್ನು ನೀಡಿದ್ದಾರೆ'' ಎಂದು ಅವನಲ್ಲಿ ಬಿನ್ನವಿಸಿಕೊಂಡರು. ಬಳಿಕ ರಾಮದಾಸರು, ''ಅಯ್ಯೋ ಪ್ರಭುವೇ, ನನಗೆ ನಿನ್ನ ದರ್ಶನವಾಗಲಿಲ್ಲವಲ್ಲಾ'' ಎಂದು ರಾಮನ ಬಳಿ ತಮ್ಮ ವಿರಹತಾಪವನ್ನು ತೋಡಿಕೊಂಡರು. ಭದ್ರಾಚಲ ಮಂದಿರದ ಪುಣ್ಯವಿಗ್ರಹಗಳನ್ನು ದರ್ಶಿಸಿದ ರಾಮದಾಸರು ಹಾಗೂ ತಾನಾ ಷಾ ತಮ್ಮ ಮನಸ್ಸಿನ ಸಂತಾಪವನ್ನು ಕಳೆದುಕೊಂಡು, ಸಮಾಧಾನ ಹೊಂದಿದರು. ರಾಮದಾಸರು ಕೀರ್ತನೆಯನ್ನು ಹಾಡಿ, ಪ್ರಭು ರಾಮಚಂದ್ರನಿಗೆ ಕೃತಜ್ಞತೆಗಳನ್ನು ಸಮರ್ಪಿಸಿದರು. ಇದೇ ಸಂದರ್ಭದಲ್ಲಿ ತಾನಾ ಷಾ ದೇವಾಲಯದ ಉಸ್ತುವಾರಿಗಾಗಿ ಸಾಕಷ್ಟು ಭೂಮಿ ಕಾಣಿಯನ್ನು ದಾನವಾಗಿ ಕೊಟ್ಟನು.

ಈ ನಡುವೆ ಶ್ರೀರಾಮನು ರಾಮದಾಸರಿಗೆ ದರ್ಶನ ಕೊಟ್ಟನು. ಅವರ ಎಲ್ಲ ಪಾಪಗಳೂ ಕ್ಷಯಗೊಂಡಿದೆಯೆಂದೂ, ಮರಣದ ನಂತರ ಅವರಿಗೆ ಮೋಕ್ಷವುಂಟಾಗುವುದೆಂದೂ ಅವನು ಹೇಳಿದನು. ಬಳಿಕ ತನ್ನ ಸೀತಾಸಮೇತವಾದ ಪಾವನರೂಪದ ಮಂಗಳ ದರ್ಶನವನ್ನು ಮಾಡಿಸಿದನು. ರಾಮದಾಸರು ದೇವರ ಸೇವೆಮಾಡುತ್ತ, ಭದ್ರಾಚಲದಲ್ಲಿಯೇ ನೆಲೆನಿಂತರು; ಭದ್ರಾಚಲ ರಾಮದಾಸರೆಂದು ಪ್ರಖ್ಯಾತರಾದರು. ತಮ್ಮ ೬೦ನೆಯ ವಯಸ್ಸಿನಲ್ಲಿ ಅವರು ರಾಮದೇವರ ಪಾದಗಳನ್ನು ಸೇರಿದರು. ❀


**'ವಿವೇಕಪ್ರಭ'** ಪತ್ರಿಕೆ ಅಂತರ್ಜಾಲದಲ್ಲಿ **'ದಿಜೌ'** ರೂಪದಲ್ಲಿ ಲಭ್ಯವಿದೆ. *ಫೈರ್‌ಫಾಕ್ಸ್* ಅಥವಾ *ಇಂಟರ್ನೆಟ್ ಎಕ್ಸ್‌ಪ್ಲೋರರ್* ಗಳಲ್ಲಿ ದಿಜೌ ಪ್ಲಗಿನ್‌ಗಳನ್ನು ಉಚಿತವಾಗಿ ಸಂಸ್ಥಾಪಿಸಿ ಈ ಸೌಲಭ್ಯವನ್ನು ಪಡೆಯಬಹುದಾಗಿದೆ. ಓದಲು ಹಾಗೂ ಡೌನ್‌ಲೋಡ್ ಮಾಡಲು ಸಂದರ್ಶಿಸಿ:

**www.vivekaprabha.net**


## 'ಜಪಯಜ್ಞ' ಕಾರ್ಯಕ್ರಮ

ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ 2016ರ **ಡಿಸೆಂಬರ್** 7 ರಿಂದ 11ರ ವರೆಗೆ (ಬುಧವಾರ – ಭಾನುವಾರ) ಮಂತ್ರದೀಕ್ಷೆ ಪಡೆದ ಭಕ್ತರಿಗಾಗಿ **'ಜಪಯಜ್ಞ'** ಕಾರ್ಯಕ್ರಮ ನಡೆಸಲಾಗುವುದು. ಈ ಕಾರ್ಯಕ್ರಮದಲ್ಲಿ ಭಾಗವಹಿಸಬಯಸುವ ಭಕ್ತರು ಬೆಳಗಾವಿ ಆಶ್ರಮವನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಬಹುದಾಗಿದೆ.

**ಫೋನ್: 0831-2432789**
ಇಮೇಲ್: mail@rkmissionashrama.org




# ಸೋದರಿ ನಿವೇದಿತಾ ಭಾಗ ೨

ಕಥೆ: ದೇವಪ್ರಸಾದ ಭಟ್ಟಾಚಾರ್ಯ ಅನುವಾದ: ಉಷಾ ಎಸ್. ಮೂರ್ತಿ ಚಿತ್ರ: ಸುನಿತಾ ವಾಸು




ಮಾರ್ಗರೆಟ್ ತನ್ನ ಜೀವನ ನಿರ್ವಹಣೆಗಾಗಿ ಶಿಕ್ಷಕ ವೃತ್ತಿ ಹಾಗೂ ಪತ್ರಿಕೋದ್ಯಮವನ್ನು ಮಾಡತೊಡಗಿದಳು.
ನಂತರ ನಾರ್ತ್‌ವೇಲ್ಸ್‌ನಲ್ಲಿರುವ ವ್ರೆಕ್ಸ್ ಹ್ಯಾಮ್‌ನಲ್ಲಿ ಕೆಲಸಕ್ಕೆ ಸೇರಿದಳು.
ವ್ರೆಕ್ಸ್‌ಹ್ಯಾಮ್ ಒಂದು ಕಲ್ಲಿದ್ದಲಿನ ಗಣಿಯ ಪ್ರದೇಶವಾಗಿತ್ತು.
ಅಲ್ಲಿ ಅವಳಿಗೆ ಇಷ್ಟವಾದ ಬಡವರ ಸೇವೆ ಹಾಗೂ ಸಮಾಜ ಸೇವೆ ಮಾಡಲು ಹೆಚ್ಚಿನ ಅವಕಾಶವಿತ್ತು.
ಪಾಠಮಾಡುವುದೆಂದರೆ ಮಾರ್ಗರೆಟ್‌ಳಿಗೆ ತುಂಬಾ ಪ್ರೀತಿ. ಅವಳು ಕಿಂಗ್ಸ್‌ಲೇ ಗೇಟ್ ಶಾಲೆಯಲ್ಲಿ ಸ್ವತಂತ್ರವಾಗಿ ಶಿಕ್ಷಕ ವೃತ್ತಿಯನ್ನು ಮಾಡತೊಡಗಿದಳು.
ಇಲ್ಲಿ ಮುಕ್ತವಾದ ಶಿಕ್ಷಣಕ್ರಮವಿತ್ತು. ಮಕ್ಕಳಿಗೆ ಆಟದ ಮೂಲಕವೇ ಎಲ್ಲವನ್ನೂ ಹೇಳಿಕೊಡಲಾಗುತ್ತಿತ್ತು. ಮಕ್ಕಳು ಆಟವಾಡುತ್ತಾ ಕಲಿಯುತ್ತಿದ್ದರು.


ಸ್ವಾಮಿ ವಿವೇಕಾನಂದರು ಅಮೆರಿಕಾದ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ, ಎಲ್ಲೆಡೆಯೂ ಪ್ರಖ್ಯಾತರಾಗಿದ್ದರು.
ಸ್ವಾಮೀಜಿಯವರು ವೇದಾಂತವನ್ನು ಬೋಧಿಸಲು ಇಂಗ್ಲೆಂಡಿಗೆ ತೆರಳಿದರು.
ಒಂದು ದಿನ ಮಾರ್ಗರೆಟ್ ಸಂಪ್ರದಾಯಸ್ಥ ಮಹಿಳೆಯರ ಒಂದು ಕೂಟಕ್ಕೆ ಸ್ವಾಮೀಜಿಯವರ ಉಪನ್ಯಾಸವನ್ನು ಕೇಳಲು ಹೋದಳು.
ಒಂದು ಚಳಿಗಾಲದ ಭಾನುವಾರ ಮಧ್ಯಾಹ್ನ ಲಂಡನ್‌ನ ವೆಸ್ಟ್ ಎಂಡ್ ಡ್ರಾಯಿಂಗ್ ರೂಮ್‌ನಲ್ಲಿ ಅವರೆಲ್ಲಾ ಅರ್ಧವೃತ್ತಾಕಾರವಾಗಿ, ಸ್ವಾಮೀಜಿಯವರ ಎದುರಿಗೆ ಕುಳಿತಿದ್ದರು.
ಅವರ ಎಲ್ಲಾ ಪ್ರಶ್ನೆಗಳಿಗೆ ಸ್ವಾಮೀಜಿ ಉತ್ತರಿಸುತ್ತಿದ್ದರು.
ಮಧ್ಯೆ ಮಧ್ಯೆ ಕೆಲವು ಸಂಸ್ಕೃತದ ಶ್ಲೋಕಗಳನ್ನು ಹೇಳಿ, ಅದರ ಅರ್ಥವನ್ನು ಇಂಗ್ಲಿಷಿನಲ್ಲಿ ವಿವರಿಸುತ್ತಿದ್ದರು.